<u>ಪಿಡಬ್ಲ್ಯೂ-**3**</u>

<u>ದಿನಾಂಕಃ **06-06-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಜೆ ಕೆ ಕೆ ವಕೀಲರಿಂದಃ-</u>

ವಾದಿ ನನಗೆ ಸಂಬಂಧಿಕರಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಿಚಾರವನ್ನು ವಕೀಲರಿಗೆ ವಕೀಲರೇ ಬರೆಸಿರುತ್ತಾರೆ ನಾನು ಹೇಳಿ ಬರೆಸಿರುವುದಿಲ್ಲ. ಕರಾರು ಪತ್ರ ದಿಃ15-09-2017ರಂದು ಆಗಿರುತ್ತದೆ. ಪೇಪರ್ ನ್ನು ವಾದಿಯೇ ತಂದಿರುತ್ತಾರೆ. 2ನೇ ಪ್ರತಿವಾದಿ ಕರಾರು ಪತ್ರ ಬರೆಯುಂತೆ ಹೇಳಿದರು. ಮುಂಗಡ ಹಣ ಆ ದಿನ ಕೊಡುತ್ತಿದ್ದೇವೆ ಎಂದು ಬರೆಸಿಲ್ಲ ಮುಂಗಡ ಹಣ ಮೊದಲೇ ಕೊಟ್ಟಿದ್ದರು. ಕರಾರು ಪತ್ರವಾದ ದಿನ ಯಾವುದೇ ಮುಂಗಡ ಹಣ ಕೊಟ್ಟಿಲ್ಲ ಎಂದರೆ ಸರಿ. ಕರಾರು ಪತ್ರವಾಗುವ 3ತಿಂಗಳ ಮೊದಲೇ ಮುಂಗಡ ಹಣ ಕೊಟ್ಟಿದ್ದು ದಿನಾಂಕ ಗೊತ್ತಿಲ್ಲ. ಮಾತುಕತೆ ಸಮಯದಲ್ಲಿ ನಾನು ಇದ್ದೆ. ಮಾತುಕತೆ ದಿನ ಯಾವುದೇ ಕರಾರು ಪತ್ರವಾಗಿಲ್ಲ. ಮಾತುಕತೆ ದಿನ ರೂ.7ಲಕ್ಷ ಕೊಟ್ಟರು. ಆ ದಿನ ನಾನು, ಪ್ರತಿವಾದಿಯರು, ಮೋಹನ್ ರಾಜ್ ಮತ್ತು ವಾದಿ ಇದ್ದೆವು. ಆ ಹಣವನ್ನು ವಾದಿ ಮನೆಯಲ್ಲಿ ನಗದಾಗಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಯಾವುದೇ ದಾಖಲೆ ಮಾಡಲಿಲ್ಲ. ಸಾಮಾನ್ಯವಾಗಿ ಅಷ್ಟೊಂದು ಮೊತ್ತದ ಹಣ ಕೊಟ್ಟರೆ ದಾಖಲಾತಿ ಬರೆಸಿಕೊಂಡು ಸಹಿ ಪಡೆಯುತ್ತಾರೆ ಎಂದರೆ ಸರಿ. ಮುಂಗಡ ಹಣ ಕೊಡದೇ ಇದ್ದ ಕಾರಣ ಯಾವುದೇ ದಾಖಲಾತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಏಕೆಂದರೆ ಮುಂದೆ ಕರಾರು ಪತ್ರ ಬರೆದುಕೊಡುವಂತೆ ಮಾತುಕತೆಯಾಗಿತ್ತು. ನಾನು ಕರಾರು ಪತ್ರವನ್ನು ಓದಿ ಸಹಿ ಮಾಡಿರುತ್ತೇನೆ. ಕರಾರು ಪತ್ರದಲ್ಲಿ 3 ತಿಂಗಳ ಹಿಂದೆ ಮುಂಗಡ ಹಣ ಕೊಡಲಾಗಿತ್ತು ಎಂದು ಬರೆಸಿಲ್ಲ. ಕರಾರು ಪತ್ರ ಮಾಡುವ ದಿನ ರೂ.1ಲಕ್ಷ ಹಣ ಕೊಟ್ಟಿಲ್ಲ ಚೆಕ್ ಕೊಡುವುದಾಗಿ ಮಾತನಾಡಿಕೊಂಡರು. ಚೆಕ್ ಕೊಟ್ಟ ವಿಷಯವನ್ನು ಕರಾರು ಪತ್ರದಲ್ಲಿ ಬರೆದಿರುತ್ತದೆ. ಆ ದಿನ ನಾನು ದಾವಾಸ್ವಿಯ ಪಹಣಿ ಪತ್ರಿಕೆ ನೋಡಿರುತ್ತೇನೆ. ನಾನು ಅದನ್ನು ನೋಡಿದಾಗ ರೂ.2 ಲಕ್ಷ ಬ್ಯಾಂಕ್ ನಲ್ಲಿ ಸಾಲ ಇರುವುದು ಕಂಡು ಬಂದಿದೆ. ಹಿರೇಸಮುದ್ರ ದ ಸ.ನಂ.38/2ರ ಕರಾರು ಪತ್ರದ ಆಸ್ತಿಯಾಗಿರುತ್ತದೆ. 1ನೇ ಪ್ರತಿವಾದಿ ನನಗೂ ಪರಿಚಯಸ್ಥರು. ನಮ್ಮ ಊರು ಬಾಗೀವಾಳು ಮತ್ತು ಹಿರಿಸಮುದ್ರ ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ಆತನ ತಂದೆಯವರು ಕೂಡ ನನ್ನ ಜೊತೆ ವಿಶ್ವಾಸ ಹೊಂದಿದ್ದರು ಎಂದರೆ ಸರಿ. ಆ ಕಾರಣದಿಂದ 1ನೇ ಪ್ರತಿವಾದಿಗೆ ಎಷ್ಟು ಜನ ಸಹೋದರ ಸಹೋದರಿಯರು ಇರುತ್ತಾರೆ ಎಂಬ ವಿಷಯ ಗೊತ್ತಿತ್ತು ಎಂದರೆ ಸಾಕ್ಷಿ

ಇಬ್ಬರು ಇರುತ್ತಾರೆ ಎಂದು ಗೊತ್ತಿತ್ತು. ಅವರಿಗೆ ಇಬ್ಬರು ಸಹೋದರಿಯವರು ಇರುವರು ಎಂದು ಗೊತ್ತಿತ್ತು. ದಾವಾಸ್ತಿ ದುರಸ್ತು ಆಗಿಲ್ಲ ಎಂದರೆ ಸರಿ. ಕರಾರು ಪತ್ರದಂತೆ ಪ್ರತಿವಾದಿಯರು ಮುಂಗಡ ಹಣ ಕೊಟ್ಟಿಲ್ಲ ಎಂದು ನನ್ನ ಬಳಿ ಬಂದು ಹಲವಾರು ಬಾರಿ ಕೇಳಿದರು ಎಂದರೆ ಸರಿಯಲ್ಲ. ಆಗ ಪ್ರತಿವಾದಿಯರ ಮುಂಗಡ ಹಣ ಕೊಡದೇ ಇದ್ದರೇ ಕರಾರು ಪತ್ರ ರದ್ದು ಪಡಿಸುವಂತೆ ನನಗೆ ಹೇಳಿ ಹೋದರು ಎಂದರೆ ಸರಿಯಲ್ಲ. ಆಗ ನಾನು ಪ್ರತಿವಾದಿಯರಿಗೆ ಬೇರೆಯವರ ಜೊತೆ ಕರಾರು ಪತ್ರ ಮಾಡಿಕೊಂಡು ಹಣ ಪಡೆಯುವಂತೆ ಹೇಳಿದೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣ ವಿಚಾರ ಗೊತ್ತಿಲ್ಲ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯರಿಗೆ ಯಾವುದೇ ಮುಂಗಡ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ರೂ. 1ಲಕ್ಷದ ಚೆಕ್ ನ್ನು ವಾದಿ ಚೀಟಿ ವ್ಯವಹಾರಕ್ಕಾಗಿ ಕೊಟ್ಟ ಚೆಕ್ ಎಂದರೆ ಸರಿಯಲ್ಲ. ವಾದಿಯೇ ಈ ದಿನ ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **06-06-2025.**